# 5

# ಈ ದಿನದ ವಿಧೇಯತೆ: ಹಳೇ ಒಡಂಬಡಿಕೆಯೇ ಅಥವಾ ಹೊಸ ಒಡಂಬಡಿಕೆಯೇ?

ಹೊಸ ಒಡಂಬಡಿಕೆಯ ಆರಾಧನೆಯು, ಹಳೆ ಒಡಂಬಡಿಕೆಯಿಂದ ಸ್ಪಷ್ಟವಾದ ಪ್ರತ್ಯೇಕತೆಯನ್ನು ಹೊಂದಿರುತ್ತದೆ. ಮೋಶೆಯನ್ನು ನಾವು ನೋಡುವುದಾದರೆ, ಅವನು ಯೇಸುವಿನ ಕಡೆಗೆ ತೋರಿಸುತ್ತಾನೆ (ಧರ್ಮೋಪದೇಶಕಾಂಡ 18:18; ಯೋಹಾನ 5:46; ಅಪೊಸ್ತಲರಕೃತ್ಯಗಳು 3:22, 23), ಆತನು ಕ್ರೈಸ್ತರ ನಂಬಿಕೆಗೆ ಆಧಾರವಾಗಿದ್ದಾನೆ (ಇಬ್ರಿಯ 2:10; 12:2). ಈ ಎರಡೂ ಒಡಂಬಡಿಕೆಯ ನಡುವಣ ವ್ಯತ್ಯಾಸಗಳನ್ನು ತಿಳಿದ ನಂತರ, ಹಳೆ ಒಡಂಬಡಿಕೆಯ ಆರಾಧನೆಯ ನಿಯಮಗಳನ್ನು *ಏಕೆ* ಹೊಸ ಒಡಂಬಡಿಕೆಯಲ್ಲಿ ಪ್ರಾಯೋಜಿಸಬಾರದು ಎಂದು ತಿಳಿಯುತ್ತೇವೆ. ಶಾಸ್ತ್ರದ ಒಂದು ಭಾಗಕ್ಕೆ ಒಳಪಟ್ಟಿದ್ದರೆ, ಅದರ ಉಳಿದ ಭಾಗಕ್ಕೂ ಒಳಪಡಬೇಕಾಗುತ್ತದೆ (ಗಲಾತ್ಯ 3:24, 25; 5:3). ಹೊಸ ಒಡಂಬಡಿಕೆಯ ಮಹತ್ವವನ್ನು ಇಬ್ರಿಯ ಪತ್ರಿಕೆ ತೋರಿಸುತ್ತದೆ (7:19, 22 ನೋಡಿ).

**ಸರ್ವಾಂಗ ಹೋಮ ಮತ್ತು ಕ್ಷಮಾಪಣೆ**

ಧರ್ಮಶಾಸ್ತ್ರವು ಅನೇಕ ಯಜ್ಞಗಳನ್ನು ಬಯಸುತ್ತದೆ (ಯಾಜಕಕಾಂಡದಲ್ಲಿ ತಿಳಿಸಿರುವಂತೆ) ಆ ಯಜ್ಞಗಳು ಪಾಪವನ್ನು ನಿವಾರಣೆ ಮಾಡಲಾರವು (ಇಬ್ರಿಯ 10:4) ಯೇಸುವಿನ ಮರಣದ ಮೂಲಕ ಕ್ಷಮಾಪಣೆ ದೊರೆಯುತ್ತದೆ (1 ಪೇತ್ರ 2:24) ಯೇಸುವಿಗೆ ವಿಧೇಯರಾಗುವದರಿಂದ ರಕ್ಷಣೆ ದೊರೆಯುತ್ತದೆ (ಇಬ್ರಿಯ 5:9). ಒಬ್ಬನು ಸುವಾರ್ತೆಯನ್ನು ನಂಬಿಕೆ, ಮಾನಸಾಂತರ ಪಟ್ಟು, ಕ್ರಿಸ್ತನಲ್ಲಿರುವ ವಿಶ್ವಾಸವನ್ನು ಅರಿಕೆ ಮಾಡುವಾಗ, ದೀಕ್ಷಾಸ್ನಾನ ಹೊಂದಬಹುದು (ಮಾರ್ಕ 16:15, 16; ಅಪೊಸ್ತಲರಕೃತ್ಯಗಳು 2:38; ರೋಮಾಪುರ 10:10). ಅವನು ಬೆಳಕಿನಲ್ಲಿ ಮುನ್ನಡೆಯುತ್ತಾನೆ (1 ಯೋಹಾನ 1:7-9). ಬಾಯಿಯಿಂದ ಹೊರಡುವ ಸ್ತುತಿ ಮತ್ತು ಉತ್ತಮ ಕ್ರಿಯೆಗಳೇ, ಯಜ್ಞವಾಗಿರುತ್ತದೆ (ಇಬ್ರಿಯ 13:15, 16).

**ಸಂಭ್ರಮ ಹಬ್ಬಗಳ ಹಾಗೂ ಸಬ್ಬತ್**

ಧರ್ಮಶಾಸ್ತ್ರದಲ್ಲಿ, ಇಸ್ರಾಯೇಲ್ಯರು ಆಚರಿಸಬೇಕಾದ ಹಬ್ಬಗಳ ಕುರಿತು ನೋಡುತ್ತೇವೆ (ಅರಣ್ಯಕಾಂಡ 28:16-25; ಧರ್ಮೋಪದೇಶಕಾಂಡ 16:16; 2 ಪೂರ್ವಕಾಲವೃತ್ತಾಂತ 8:13). ಕರ್ತನ ದಿನವೇ ಕ್ರೈಸ್ತರಿಗೆ ವಿಶೇಷವಾದ ದಿನವಾಗಿದೆ (ಪ್ರಕಟನೆ 1:10). ಯೇಸುವನ್ನು ಗೌರವಿಸಲು, ಈ ವಿಶೇಷವಾದ ದಿನವನ್ನು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಭಾನುವಾರದ ದಿವಸವನ್ನು ಆದಿ ಸಭೆಯವರು, "ಕರ್ತನ ದಿನವನ್ನಾಗಿ" ಆಚರಿಸಿದರು, ಅದು ವಾರದ ಮೊದಲನೆಯ ದಿನವಾಗಿತ್ತು (ಅಪೊಸ್ತಲರಕೃತ್ಯಗಳು 20:7; 1 ಕೊರಿಂಥ 16:2), ಕರ್ತನ ಬೋಜನದ ಮೂಲಕ ಯೇಸುವನ್ನು ನೆನಪಿಸಿಕೊಳ್ಳುವ ದಿನ.

**ಆರಾಧನೆಯ ಸ್ಥಳ**

ಇಸ್ರಾಯೇಲ್ಯರು ಯೆರುಸಲೇಮಿನಲ್ಲಿ ಆರಾಧನೆಗೆ ಕೂಡಿಬರಬೇಕಿತ್ತು ಎಂದು ದೇವರು

ಬಯಸಿದ್ದನು. ಕ್ರೈಸ್ತರ ಆರಾಧನೆಗೆ ಒಂದು ನಿರ್ದಿಷ್ಟವಾದ ಸ್ಥಳವು ಇರುವದಿಲ್ಲ. ಆರಾಧನೆಯ ಸ್ಥಳದ ಕುರಿತು ಯೇಸು ನಿರ್ಭಂಧನೆಗಳನ್ನು ತಿಳಿಸಿರುವದಿಲ್ಲ (ಯೋಹಾನ 4:21-24).

**ಕೊಡುವುದು**

ಧರ್ಮಶಾಸ್ತ್ರದಲ್ಲಿ, ದಶಮಾಂಶ ನಿರ್ಣಯವಾಗಿತ್ತು. ಆದರೆ ಮೂರು ವರ್ಷಗಳಿಗೆ ಒಂದು ಸಾರಿ ಸುಂಕವನ್ನು ನೀಡಬೇಕಿತ್ತು (ಧರ್ಮೋಪದೇಶಕಾಂಡ 14:28, 29; 26:12) ದಶಮಾಂಶವನ್ನು ಕ್ರೈಸ್ತರಿಗೆ, ಎಲ್ಲಿಯೂ ವಿಧಿಸಿರುವದಿಲ್ಲ. ಅವರ ಹೃದಯದಲ್ಲಿ ಪ್ರೇರಪಣೆ ಹೊಂದಿದಂತೆ, ಹೃದಯಪೂರ್ವಕವಾಗಿ ಮಾತ್ರ ವಾರದ ಮೊದಲನೆಯ ದಿನದಲ್ಲಿ ನೀಡಬೇಕು (1 ಕೊರಿಂಥ 16:2; 2 ಕೊರಿಂಥ 9:7).

**ಯಾಜಕತ್ವ**

ಯಾಜಕರ ಮೂಲಕ, ಇಸ್ರಾಯೇಲ್ಯರು ದೇವರ ಬಳಿ ಬರಬೇಕಿತ್ತು, ಆರೋನನ ವಂಶದವರು, ಲೇವಿಯ ಕುಲದವರ ಮೂಲಕ ಮಾತ್ರ ಬರಬೇಕಿತ್ತು (ವಿಮೋಚನಕಾಂಡ 28:41; 29:9). ಈ ದಿನಗಳಲ್ಲಿ, ಕ್ರೈಸ್ತರಾದ ನಾವು ನಮ್ಮ ಮದ್ಯಸ್ಥಿಕನಾದ ಯೇಸುವಿನ, ಮೂಲಕ ದೇವರ ಬಳಿಗೆ ಬರುತ್ತೇವೆ (1 ತಿಮೊಥೆ 2:5). ಈಗ ಸ್ತ್ರೀ ಪುರುಷರಾದ ಕ್ರೈಸ್ತರೆಲ್ಲರೂ ಯಾಜಕ ವರ್ಗದವರಾಗಿರುವರು (1 ಪೇತ್ರ 2:5, 9; ಪ್ರಕಟನೆ 1:6; 5:10).

ಹೊಸ ಒಡಂಬಡಿಕೆಯ ಆಡಳಿತದಲ್ಲಿ, ಕ್ರೈಸ್ತರೆಲ್ಲರೂ, "ದೇವರಾದುಕೊಂಡ ಜನಾಂಗ, ಪವಿತ್ರಯಾಜಕ ವರ್ಗದವರೂ, ಪರಿಶುದ್ಧ ಜನಾಂಗ ಹಾಗು ದೇವರ ಸ್ವಕೀಯ ಪ್ರಜೆಗಳಾಗಿದ್ದಾರೆ" (1 ಪೇತ್ರ 2:9).